# www.karunaduexams.com

ಸಾಮಾನ್ಯ ಜ್ಞಾನ ಮತ್ತು ಪ್ರಚಲಿತ ವಿದ್ಯಮಾನ ಕ್ವಿಜ್- ಮಾರ್ಚ್,3,4,2017

www.karunaduexams.com

1. ವಿಶ್ವ ವನ್ಯಜೀವಿ ದಿನವನ್ನು ಯಾವ ದಿನದಂದು ಆಚರಿಸಲಾಗುತ್ತದೆ?

ಅ) ಮಾರ್ಚ್ 1

ಆ) ಮಾರ್ಚ್ 2

ಇ) ಮಾರ್ಚ್ 3

ಈ) ಮಾರ್ಚ್ 4

ಮಾರ್ಚ್ 3

ವಿಶ್ವ ವನ್ಯಜೀವಿ ದಿನ (World Wildlife Day)ವನ್ನು ಪ್ರತಿ ವರ್ಷ ಮಾರ್ಚ್ 4 ರಂದು ಆಚರಿಸಲಾಗುವುದು. "ಸೈಟ್ಸ್ (CITES)" ಒಪ್ಪಂದಕ್ಕೆ ಸಹಿ ಹಾಕಿದ ಈ ದಿನವನ್ನು ವಿಶ್ವ ವನ್ಯಜೀವಿ ದಿನವೆಂದು ಆಚರಿಸಲಾಗುತ್ತಿದೆ. "ಯುವಜನತೆಗೆ ಕಿವಿಕೊಡಿ" ಇದು ಈ ವರ್ಷದ ವನ್ಯಜೀವಿ ದಿನದ ಧ್ಯೇಯವಾಕ್ಯ.

2. ವಿಶ್ವದ ಶ್ರೇಷ್ಠ ಪುಟ್ಬಾಲ್ ಆಟಗಾರ "ರೇಮಂಡ್ ಕೊಪ" ಇತ್ತೀಚೆಗೆ ನಿಧನರಾದರು. ಅಂದಹಾಗೆ ಕೊಪ ಯಾವ ದೇಶಕ್ಕೆ ಸಂಬಂಧಿಸಿದ್ದಾರೆ?

ಅ) ಫ್ರಾನ್ಸ್

ಆ) ಇಟಲಿ

ಇ) ಮೆಕ್ಸಿಕೊ

ಈ) ಬ್ರೆಜಿಲ್

ಫ್ರಾನ್ಸ್

ಫ್ರಾನ್ಸ್ ನ ಪುಟ್ಬಾಲ್ ಕ್ರೀಡೆಯ ದಂತಕತೆ ಎನಿಸಿದ್ದ "ರೇಮಂಡ್ ಕೊಪ" ರವರು ನಿಧನರಾದರು. ಕೊಪ ಅವರು ಸರ್ವಕಾಲೀಕ ಶ್ರೇಷ್ಠ ಮಿಡ್ ಫೀಲ್ಡರ್ ಆಟಗಾರನಾಗಿ ಜನಪ್ರಿಯರಾಗಿದ್ದರು.

3. "ಮಹಾನಗರ ಟೆಲಿಫೋನ್ ನಿಗಮ ಲಿಮಿಟೆಡ್ (MTNL)"ನ ನೂತನ ಮುಖ್ಯಸ್ಥರು ಹಾಗೂ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಯಾರು ನೇಮಕಗೊಂಡಿದ್ದಾರೆ?

ಅ) ಸುಭಾಷ್ ಚಂದ್ರ

ಆ) ವಿಜಯ ಪ್ರಕಾಶ್

ಇ) ಪಿ ಕೆ ಪುರ್ವರ್

ಈ) ಪ್ರತಾಪ್ ಸಿಂಗ್

ಪಿ ಕೆ ಪುರ್ವರ್

ಪಿ ಕೆ ಪುರ್ವರ್ ಅವರು "ಮಹಾನಗರ ಟೆಲಿಫೋನ್ ನಿಗಮ ಲಿಮಿಟೆಡ್ (MTNL)"ನ ನೂತನ ಮುಖ್ಯಸ್ಥರು ಹಾಗೂ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ನೇಮಕಗೊಂಡಿದ್ದಾರೆ. ಈ ಹಿಂದೆ

www.karunaduexams.com

ಪುರ್ವರ್ ಅವರು ಎಂಟಿಎನ್ಎಲ್ ನ ಹಣಕಾಸು ವಿಭಾಗದ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರು.

4. ರಾಷ್ಟ್ರ ವ್ಯಾಪ್ತಿಯ “ಸ್ವಚ್ಚ ಶಕ್ತಿ ಸಪ್ತಾಹ”ಕ್ಕೆ ಯಾವ ನಗರದಲ್ಲಿ ಚಾಲನೆ ನೀಡಲಾಯಿತು?

ಅ) ಗುರುಗ್ರಾಮ

ಆ) ಪುಣೆ

ಇ) ಭೂಪಾಲ್

ಈ) ಅಹಮದಬಾದ್

ಹರಿಯಾಣದ ಗುರುಗ್ರಾಮದಲ್ಲಿ ರಾಷ್ಟ್ರವ್ಯಾಪ್ತಿಯ “ಸ್ವಚ್ಚ ಶಕ್ತಿ ಸಪ್ತಾಹ”ಕ್ಕೆ ಕೇಂದ್ರ ಗ್ರಾಮೀಣಭಿವೃದ್ದಿ ಮತ್ತು ಪಂಚಾಯತ್ ರಾಜ್ ಸಚಿವ ನರೇಂದ್ರ ಸಿಂಗ್ ತೋಮರ್ ಅವರು ಚಾಲನೆ ನೀಡಿದರು. ನೈರ್ಮಲ್ಯ ಹಾಗೂ ಸ್ವಚ್ಚತೆ ಬಗ್ಗೆ ಅರಿವು ಮೂಡಿಸುವುದು ಈ ಸಪ್ತಾಹದ ಉದ್ದೇಶ. ಸ್ವಚ್ಚ ಶಕ್ತಿ ಸಪ್ತಾಹ ವನ್ನು ಮಾರ್ಚ್ 1 ರಿಂದ ಮಾರ್ಚ್ 8, 2017 ರವರೆಗೆ ಆಚರಿಸಲಾಗುವುದು.

5. “2017 ಹಿಂದೂ ಮಹಾಸಾಗರ ದಂಡೆಯ ರಾಷ್ಟ್ರಗಳ ಒಕ್ಕೂಟ (Indian Ocean Rim Association)” ಶೃಂಗಸಭೆಯನ್ನು ಯಾವ ರಾಷ್ಟ್ರದಲ್ಲಿ ಆಯೋಜಿಸಲಾಗುವುದು?

ಅ) ಇಂಡೋನೇಷಿಯಾ

ಆ) ಶ್ರೀಲಂಕಾ

ಇ) ಭಾರತ

ಈ) ತಾಂಜಾನಿಯ

ಇಂಡೋನೇಷಿಯಾ

2017 ಹಿಂದೂ ಮಹಾಸಾಗರ ದಂಡೆಯ ರಾಷ್ಟ್ರಗಳ ಒಕ್ಕೂಟ (Indian Ocean Rim Association)” ಶೃಂಗಸಭೆ ಇಂಡೋನೇಷಿಯಾದ ಜರ್ಕಾತದಲ್ಲಿ ಮಾರ್ಚ್ 7 ರಿಂದ ನಡೆಯಲಿದೆ. ಸಾಗರೋತ್ತರ ಸಹಕಾರ ಹಾಗೂ ಭಯೋತ್ಪಾದನೆ ಕುರಿತು ಶೃಂಗಸಭೆಯಲ್ಲಿ ಚರ್ಚಿಸಲಾಗುವುದು. “ಹಿಂದೂ ಮಹಾಸಾಗರ ದಂಡೆಯ ರಾಷ್ಟ್ರಗಳ ಒಕ್ಕೂಟ (Indian Ocean Rim Association)”ದ 21 ರಾಷ್ಟ್ರಗಳು ಹಾಗೂ ಏಳು ವೀಕ್ಷಣಾ ರಾಷ್ಟ್ರಗಳು ಶೃಂಗಸಭೆಯಲ್ಲಿ ಭಾಗವಹಿಸಲಿವೆ.

6. “When Crime Pays – Money and Muscle in Indian Politics” ಪುಸ್ತಕದ ಲೇಖಕರು ____-?

ಅ) ಪಂಕಜ್ ಮಿಶ್ರಾ

ಆ) ಅಮಿತಾಬ್ ಕಾಂತ್

www.karunaduexams.com

ಇ) ರಾಜೇಂದ್ರ ಸಿಂಗ್

ಈ) ಮಿಲನ್ ವೈಷ್ಣವ್

ಮಿಲನ್ ವೈಷ್ಣವ್

"When Crime Pays – Money and Muscle in Indian Politics" ಪುಸ್ತಕವನ್ನು ಮಿಲನ್ ವೈಷ್ಣವ್ ಬರೆದಿದ್ದಾರೆ. ಭಾರತೀಯ ರಾಜಕೀಯತೆಯಲ್ಲಿರುವ ಭ್ರಷ್ಟಾಚಾರ ಹಾಗೂ ಅಪರಾಧಿತನದ ಬಗ್ಗೆ ಪುಸ್ತಕದಲ್ಲಿ ವಿಶ್ಲೇಷಿಸಲಾಗಿದೆ.

7. ಪ್ರಸಿದ್ದ ಬುಡಕಟ್ಟು ಉತ್ಸವ "ಭಗೊರಿಯ (Bhagoria)" ಯಾವ ರಾಜ್ಯದಲ್ಲಿ ಆರಂಭಗೊಂಡಿದೆ?

ಅ) ಮಧ್ಯ ಪ್ರದೇಶ

ಆ) ಮಣಿಪುರ

ಇ) ತ್ರಿಪುರ

ಈ) ಜಾರ್ಖಂಡ್

ಮಧ್ಯ ಪ್ರದೇಶ

ವಾರ್ಷಿಕ ಬುಡಕಟ್ಟು ಉತ್ಸವ "ಭಗೋರಿಯ" ಮಧ್ಯಪ್ರದೇಶದ ಜಾಬೊವ ಹಾಗೂ ಇತರೆ ನಾಲ್ಕು ಜಿಲ್ಲೆಗಳಲ್ಲಿ ಆರಂಭಗೊಂಡಿತು.

8. 13ನೇ "ಆರ್ಥಿಕ ಸಹಕಾರ ಒಕ್ಕೂಟ (Economic Co-operation Association)"ದ ಶೃಂಗಸಭೆ ಯಾವ ದೇಶದಲ್ಲಿ ನಡೆಯಿತು?

ಅ) ಭಾರತ

ಆ) ಪಾಕಿಸ್ತಾನ

ಇ) ತಜಕಿಸ್ತಾನ

ಈ) ಉಜ್ಬೇಕಿಸ್ತಾನ

ಪಾಕಿಸ್ತಾನ

13ನೇ "ಆರ್ಥಿಕ ಸಹಕಾರ ಒಕ್ಕೂಟ (Economic Co-operation Association)" ಶೃಂಗಸಭೆ ಪಾಕಿಸ್ತಾನದ ಇಸ್ಲಮಾಬಾದ್ ನಲ್ಲಿ ಮಾರ್ಚ್ 1 ರಂದು ನಡೆಯಿತು. ವ್ಯಾಪಾರ, ಇಂಧನ, ಪ್ರವಾಸೋದ್ಯಮ, ಆರ್ಥಿಕ ಬೆಳವಣಿಗೆ ಸಂಬಂಧಿಸಿದಂತೆ ಪರಸ್ಪರ ಸಹಕಾರ ಸಾಧಿಸುವುದು ಶೃಂಗಸಭೆಯ ಧ್ಯೇಯ. ಟರ್ಕಿಯ ಹಲಿಲ್ ಇಬ್ರಾಹಿಂ ಅಕಾ ಅವರು ಈ ಒಕ್ಕೂಟದ ಪ್ರಸ್ತುತ ಸೆಕ್ರೆಟರಿ ಜನರಲ್ ಆಗಿದ್ದಾರೆ.

9. ಇತ್ತೀಚೆಗೆ ನಿಧನರಾದ "ರೆನೆ ಪ್ರೆವಲ್" ಅವರು ಯಾವ ದೇಶದ ಮಾಜಿ ಅಧ್ಯಕ್ಷರು?

www.karunaduexams.com

ಅ) ಹೈಟಿ

ಆ) ಇಸ್ರೇಲ್

ಇ) ಜಪಾನ್

ಈ) ಫಿಲಿಫೈನ್ಸ್

ಹೈಟಿ

ಹೈಟಿಯ ಮಾಜಿ ಅಧ್ಯಕ್ಷ "ರೆನೆ ಗಾರ್ಸಿಯಾ ಪ್ರೆವಲ್" ಅವರು ನಿಧನರಾದರು. ಬಡವರ ಬಂಧು ಎಂದೇ ಖ್ಯಾತರಾಗಿದ್ದ ಅವರು ಎರಡು ಬಾರಿಯ ಹೈಟಿಯ ಅಧ್ಯಕ್ಷ ಹುದ್ದೆಯನ್ನು ಅಲಂಕರಿಸಿದ್ದರು.

10. ಯಾವ ರಾಜ್ಯ ಇತ್ತೀಚೆಗೆ ಅಳಿವಿನಂಚಿನಲ್ಲಿರುವ "ಕುರುಖ್" ಭಾಷೆಗೆ ಅಧಿಕೃತ ಭಾಷೆ ಸ್ಥಾನಮಾನವನ್ನು ನೀಡಿತು?

ಅ) ಪಶ್ಚಿಮ ಬಂಗಾಳ

ಆ) ಆಂಧ್ರ ಪ್ರದೇಶ

ಇ) ತೆಲಂಗಣ

ಈ) ಒಡಿಶಾ

ಪಶ್ಚಿಮ ಬಂಗಾಳ

www.karunaduexams.com